ಓಎಸ್. 145/2021

ಪಿ. ಡಬ್ಲ್ಯೂ ನಂ. - 2

<u>ದಿನಾಂಕಃ 04.04.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

**<u>ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಾದ ಶ್ರೀ. ಟಿ.ಬಿ.ಎಂ. ರವರಿಂದ –</u>**

ನಾನು ವಾದಿ ಮಸೀದಿಯ ಸದಸ್ಯನಾಗಿದ್ದೇನೆ. ಸೈಯದ್ ತಾಹಿರ್ ಹುಸೇನ್ ರವರು ಈ ಹಿಂದೆ ನಮ್ಮ ಮಸೀದಿಯ ಕಾರ್ಯದರ್ಶಿಗಳಾಗಿದ್ದು, ಅವರು ಒಂದು ವರ್ಷದ ಹಿಂದೆ ಮೃತ ಪಟ್ಟಿರುತ್ತಾರೆ. ಮಸೀದಿ ಸಮಿತಿಯವರು ಈ ಪ್ರಕರಣದಲ್ಲಿ ಪ್ರತಿನಿಧಿಸಲು ನನಗೆ ವಿಶೇಷ ಅಧಿಕಾರ ಪತ್ರವನ್ನು ನೀಡಿದ್ದಾರೆ.

ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

ಪಿಡಬ್ಲ್ಯೂ 1 ರವರ ಮೂಲಕ ನಮ್ಮ ಮಸೀದಿಯ ಪರವಾಗಿ ಈಗಾಗಲೇ ನಿಪಿ–1 ರಿಂದ 14 ರಂತೆ ಗುರುತಿಸಿರುವ ದಾಖಲೆಗಳನ್ನು ನಾನು ಅಂತೆಯೇ ಅನುಮೋದಿಸುತ್ತೇನೆ. ಅಧಿಕಾರ ಪತ್ರವನ್ನು ನಿಪಿ–15 ಎಂದು, ಠರಾವಿನ ಯಥಾ ನಕಲನ್ನು ನಿಪಿ–16 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.